# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 246 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-07-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರಯೋಜನೆ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಇಂದಿರಾ ಕ್ಯಾಂಟೀನ್ ಗಳ ಸಂಖ್ಯೆ ಎಷ್ಟು; ಇದರಲ್ಲಿ ಮಂಜೂರಾದ ಕಾರ್ಯ ನಿರ್ವಹಿಸುತ್ತಿರುವ ಕ್ಯಾಂಟೀನ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಇಂದಿರಾ ಕ್ಯಾಂಟೀನ್ ಹಂತ-01 ರಡಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 263 ಇಂದಿರಾ ಕ್ಯಾಂಟೀನ್‌ಗಳು ಮಂಜೂರಾಗಿರುತ್ತದೆ. ಪ್ರಸ್ತುತ 212 ಕ್ಯಾಂಟೀನ್‌ಗಳು ಕಾರ್ಯ ನಿರ್ವಹಿಸುತ್ತಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01ರಲ್ಲಿ ನೀಡಿದೆ. |
| ಆ | ಹೊಸ ಮೆನುವಿನಂತೆ ಆಹಾರ ವಿತರಣೆ ಅನುಷ್ಠಾನಗೊಳಿಸಿರುವ/ ಅನುಷ್ಠಾನಗೊಳಿಸಬೇಕಿರುವ ಜಿಲ್ಲೆಗಳು ಯಾವುವು; ಹೊಸ ಮೆನುವಿನಂತೆ ಆಹಾರ ಅನುಷ್ಠಾನಗೊಳಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; ಯಾವ ಕಾಲಮಿತಿಯೊಳಗೆ ಅನುಷ್ಠಾನ ಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಹೊಸ ಮೆನುವಿನಂತೆ ಆಹಾರ ವಿತರಣೆಯನ್ನು ಮಂಡ್ಯ, ಮೈಸೂರು, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ವಿಜಯಪುರ, ವಿಜಯನಗರ, ರಾಯಚೂರು, ಹಾವೇರಿ, ಕೊಡಗು, ಗದಗ, ಕೊಪ್ಪಳ, ಉಡುಪಿ, ರಾಮನಗರ, ದಾವಣಗೆರೆ, ಯಾದಗಿರಿ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br><br>ಅನುಷ್ಠಾನಗೊಳಿಸಲು ವಿಳಂಬವಾಗಿರುವ ಜಿಲ್ಲೆಗಳ ವಿವರವನ್ನು ಅನುಬಂಧ-02ರಲ್ಲಿ ನೀಡಿದೆ. |
| ಇ | ಕಳೆದ 03 ವರ್ಷಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಬಿಡುಗಡೆಗೆ ಬಾಕಿ ಇರುವ ಮೊತ್ತವೆಷ್ಟು (ವರ್ಷವಾರು ಮಾಹಿತಿ ನೀಡುವುದು). | ಇಂದಿರಾ ಕ್ಯಾಂಟೀನ್ ಯೋಜನೆಗೆ ಕಳೆದ 03 ವರ್ಷಗಳ ಅವಧಿಯಲ್ಲಿ ಬಿಡುಗಡೆ ಮಾಡಲಾದ ಅನುದಾನ, ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರವನ್ನು ಈ ಕೆಳಕಂಡಂತೆ ವಿವರಿಸಿದೆ.<br>(ರೂ.ಕೋಟಿಗಳಲ್ಲಿ)<br>ಸಾಲು \| ಹಂಚಿಕೆ \| ಬಿಡುಗಡೆ \| ಬಾಕಿ<br>2021-22 \| 50.00 \| 50.00 \| 0.00<br>2022-23 \| 50.00 \| 25.00 \| 25.00<br>2023-24 \| 100.00 \| 71.29 \| 28.71 |
| ಈ | ಹೊಸದಾಗಿ ಇಂದಿರಾ ಕ್ಯಾಂಟೀನ್ ಗಳನ್ನು ಆರಂಭಿಸಲು ಬೇಡಿಕೆ ಇದೆಯೇ; ಎಲ್ಲೆಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟು ಎಲ್ಲೆಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆ; ಇದಕ್ಕಾಗಿ ಬೇಕಾಗಬಹುದಾದ ಅನುದಾನ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br><br>ಹೊಸದಾಗಿ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ಹಾಗೂ ಇದಕ್ಕಾಗಿ ಬೇಕಾಗಬಹುದಾದ ಅನುದಾನಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ 162 ಎಸ್‌ಎಫ್‌ಸಿ 2023, ದಿನಾಂಕ:30.11.2023 ಹಾಗೂ ದಿನಾಂಕ:18.01.2024ನ್ನು ಹೊರಡಿಸಲಾಗಿದ್ದು, ಪ್ರತಿಗಳನ್ನು ಅನುಬಂಧ-3ರಲ್ಲಿ ನೀಡಿದೆ. |

ಸಂಖ್ಯೆ:ನಅಇ 165 ಎಸ್‌ಎಫ್‌ಸಿ 2024

**( ಬಿ.ಎಸ್. ಸುರೇಶ್)**
ಮಾನ್ಯ ನಗರಾಭಿವೃದ್ಧಿ ಹಾಗೂ
ನಗರಯೋಜನೆ ಸಚಿವರು

## ಅನುಬಂಧ-01

| ಕ್ರಸಂ | ಜಿಲ್ಲೆಯ ಹೆಸರು | ಮಂಜೂರಾದ ಕ್ಯಾಂಟೀನ್ ಸಂಖ್ಯೆ | ನಿರ್ಮಾಣದವಾದ ಕ್ಯಾಂಟೀನ್ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಕ್ಯಾಂಟೀನ್ ಸಂಖ್ಯೆ |
|---|---|---|---|---|
| 1 | ಬೆಂಗಳೂರು ನಗರ | 01 | 01 | 01 |
| 2 | ಬೆಂಗಳೂರು ಗ್ರಾಮಾಂತರ | 04 | 04 | 04 |
| 3 | ರಾಮನಗರ | 05 | 04 | 04 |
| 4 | ತುಮಕೂರು | 14 | 13 | 13 |
| 5 | ಕೋಲಾರ | 06 | 03 | 03 |
| 6 | ಚಿಕ್ಕಬಳ್ಳಾಪುರ | 06 | 05 | 05 |
| 7 | ಚಿತ್ರದುರ್ಗ | 07 | 06 | 06 |
| 8 | ದಾವಣಗೆರೆ | 13 | 12 | 12 |
| 9 | ಶಿವಮೊಗ್ಗ | 12 | 08 | 08 |
| 10 | ಮೈಸೂರು | 20 | 19 | 19 |
| 11 | ಮಂಡ್ಯ | 08 | 08 | 08 |
| 12 | ಚಾಮರಾಜನಗರ | 04 | 04 | 04 |
| 13 | ಕೊಡಗು | 03 | 02 | 02 |
| 14 | ಹಾಸನ | 09 | 08 | 08 |
| 15 | ಚಿಕ್ಕಮಗಳೂರು | 08 | 07 | 07 |
| 16 | ದಕ್ಷಿಣ ಕನ್ನಡ | 11 | 10 | 10 |
| 17 | ಉಡುಪಿ | 04 | 04 | 04 |
| 18 | ಬೆಳಗಾವಿ | 16 | 11 | 11 |
| 19 | ಬಾಗಲಕೋಟೆ | 07 | 07 | 07 |
| 20 | ವಿಜಯಪುರ | 09 | 07 | 07 |
| 21 | ಹಾವೇರಿ | 08 | 03 | 03 |
| 22 | ಧಾರವಾಡ | 17 | 11 | 11 |
| 23 | ಗದಗ | 06 | 04 | 04 |
| 24 | ಉತ್ತರ ಕನ್ನಡ | 11 | 07 | 07 |
| 25 | ಕಲಬುರಗಿ | 14 | 10 | 10 |
| 26 | ಯಾದಗಿರಿ | 03 | 01 | 01 |
| 27 | ರಾಯಚೂರು | 08 | 08 | 08 |
| 28 | ಕೊಪ್ಪಳ | 05 | 03 | 03 |
| 29 | ಬೀದರ್ | 08 | 08 | 08 |
| 30 | ಬಳ್ಳಾರಿ | 08 | 08 | 08 |
| 31 | ವಿಜಯನಗರ | 08 | 06 | 06 |
| | ಒಟ್ಟು | **263** | **212** | **212** |

ಮುಖ್ಯ ಯೋಜನಾಧಿಕಾರಿ
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

## ಅನುಬಂಧ-02
## ಹೊಸಮೆನುವಿನಂತೆ ಆಹಾರ ವಿತರಣೆ ಅನುಷ್ಠಾನಗೊಳಿಸ ಬೇಕಿರುವ ಜಿಲ್ಲೆಗಳ ವಿವರ

| ಕ್ರಸಂ | ಜಿಲ್ಲೆಯ ಹೆಸರು | ವಿಳಂಭಕ್ಕೆ ಕಾರಣ |
|---|---|---|
| 1 | ಚಿಕ್ಕಬಳ್ಳಾಪುರ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ 05 ಕ್ಯಾಂಟೀನ್‌ಗಳಿಗೆ ಹೊಸ ಮೆನುವಿನಂತೆ ಆಹಾರ ಸರಬರಾಜು ಮಾಡಲು ದಿನಾಂಕ:17.10.2023 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿದ್ದು, ಟೆಂಡರ್ ಅಂತಿಮ ದಿನಾಂಕ:16.11.2023 ಆಗಿರುತ್ತದೆ. ಸದರಿ ಟೆಂಡರ್ ನಲ್ಲಿ ಒಬ್ಬರು ಮಾತ್ರ ಭಾಗವಹಿಸಿದ್ದು ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲ ಆದ ಕಾರಣ ಜಿಲ್ಲಾ ಸಮಿತಿಯಲ್ಲಿ ಸದರಿ ಟೆಂಡರ್‌ರನ್ನು ದಿನಾಂಕ:29.02.2024 ರದ್ದುಪಡಿಸಲಾಗಿರುತ್ತದೆ.<br><br>ನಂತರ ದಿನಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಟೆಂಡರ್ ಕರೆದಿರುವುದಿಲ್ಲ. ದಿನಾಂಕ:25.06.2024 ರಂದು ಡಿಟಿಎಸ್ ಅನುಮೋದನೆಯನ್ನು ಪಡೆದು ದಿನಾಂಕ:26.06.2024 ರಂದು 02 ನೇ ಟೆಂಡರ್ ಕರೆಯಲಾಗಿರುತ್ತದೆ |
| 2 | ಕೋಲಾರ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕ್ಯಾಂಟೀನ್ ಗಳಿಗೆ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ್ ಬಿಡ್ ಮೌಲ್ಯಮಾಪನ ಮಾಡಿ ದಿನಾಂಕ:15.06.2024 ರಂದು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯ ಮಂಡಿಸಿದ್ದು, ಮೇಲ್ಕಂಡ 05 ಸರಬರಾಜುದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ದಿನಾಂಕ:20.06.2024 ರಂದು ಆರ್ಥಿಕ ಬಿಡ್ ಅನುಮೋದನೆಗೆ ಜಿಲ್ಲಾ ಮಟ್ಟದ ಆರ್ಥಿಕ ಬಿಡ್ ಸಮಿತಿಯಲ್ಲಿ ಮಂಡಿಸಲಾಗಿದ್ದು, Sanganagoudai vadavadagi (Gutii Basaveshwara Man p[ower agencies) ರವರು ಎಲ್01 (232.97—20.81%) ಗುತ್ತಿಗೆದಾರರಾಗಿರುತ್ತಾರೆ. ಸದರಿ ಸರಬರಾಜುದಾರರಿಗೆ ದಿನಾಂಕ:20.06.2024 ರಂದು ಎಲ್‌ಒಎ (ಭದ್ರತಾ ಠೇವಣಿ-11,64,897.50 ಹಾಗೂ ವ್ಯತ್ಯಾಸದ ಮೊತ್ತ 61,21,050.00) ನೀಡಲಾಗಿದ್ದು, ಸರಬರಾಜುದಾರರು ಕೇವಲ 11.65 ಲಕ್ಷಗಳಿಗೆ ಭದ್ರತಾ ಠೇವಣಿ ಸಲ್ಲಿಸಿದ್ದು ಹಾಗೂ ವ್ಯತ್ಯಾಸದ ಮೊತ್ತದ ಭದ್ರತಾ ಠೇವಣಿಯನ್ನು ಸಲ್ಲಿಸಿರುವುದಿಲ್ಲ. ಸಾರ್ವಜನಿಕರಿಗೆ ಇಂದಿರಾ ಕ್ಯಾಂಟೀನ್ ಗಳಲ್ಲಿ ಬೆಳಗಿನ ಉಪಹಾರದಲ್ಲಿ ಮತ್ತು ಮದ್ಯಾಹ್ನಾ ಊಟವನ್ನು ಒದಗಿಸಬೇಕಾಗಿರುವುದರಿಂದ ಅನುಮೋದಿತ ದರಗಳಿಂದ ಶೇಕಡ 20.81 ರಷ್ಟು ಕಡಿಮೆ ನಮೂದಿಸಿ ಹಾಗೂ ಅಸಮತೋಲಿತ ಟೆಂಡರ್ ಮೊತ್ತಕ್ಕೆ ಭದ್ರತಾ ಠೇವಣಿಯನ್ನು ಸಲ್ಲಿಸದ ಕಾರಣ ಸರಬರಾಜುದಾರರು ಉತ್ತಮ ಆಹಾರವನ್ನು ಒದಗಿಸುವುದು ಸಂಶಯವಾಗಿರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉತ್ತಮ ಆಹಾರ ಒದಗಿಸುವ ಹಿತ ದೃಷ್ಟಿಯಿಂದ ಸದರಿ ಟೆಂಡರನ್ನು ರದ್ದುಪಡಿಸಿ ಮರುಟೆಂಡರ್ ಕರೆಯಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿರುತ್ತಾರೆ.<br><br>2ನೇ ಬಾರಿ ಟೆಂಡರ್ ಪ್ರಚುರಪಡಿಸಲು ದಿನಾಂಕ:25.06.2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ಡಿಟಿಎಸ್ ಅನುಮೋದನೆಗಾಗಿ ಸಲ್ಲಿಸಿದ್ದು, ದಿನಾಂಕ:26.06.2024 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ ಹಾಗೂ ದಿನಾಂಕ:03.07.2024 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ:05.07.2024 ರಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ ಪ್ರಸ್ತುತ ಇಂದಿರಾ ಕ್ಯಾಂಟೀನ್ ಹೊಸ ಮೆನು ಟೆಂಡರ್ ಹಂತದಲ್ಲಿರುತ್ತದೆ. |
| 3 | ಚಿಕ್ಕಮಗಳೂರು | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕ್ಯಾಂಟೀನ್ ಗಳಿಗೆ ಹೊಸಮೆನುವಿನಂತೆ ಆಹಾರ ಸರಬರಾಜು ಮಾಡಲು, DMA/2023- 24/IND0774 ದಿನಾಂಕ:04.11.2023 ಟೆಂಡರ್ನ ತಾಂತ್ರಿಕ ಬಿಡ್ ಪರಿಶೀಲನಾ ಸಮಯದಲ್ಲಿ ಟೆಂಡರ್ ಸಲ್ಲಿಸಿದ ಟೆಂಡರ್‌ದಾರರು ಪರಿಷ್ಕೃತ ನಮೂನೆಯಲ್ಲಿ ಬ್ಯಾಂಕರ್ಸ್ ಸರ್ಟಿಫಿಕೇಟ್ (ಲೈನ್ ಆಫ್ ಕ್ರೆಡಿಟ್) ಸಲ್ಲಿಸಿರುವುದಿಲ್ಲ ಎಂದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಕಾರಣ ಪರಿಶೀಲಿಸಿ, ದೂರು ಸರಿಯಾಗಿದ್ದನ್ನು ಖಾತರಿಮಾಡಿಕೊಂಡು ಮೊದಲನೇ ಕರೆಯನ್ನು ರದ್ದು ಪಡಿಸಿ, ಮರು ಟೆಂಡರ್ ಕರೆಯಲು ಕ್ರಮವಹಿಸಲಾಯಿತು.<br><br>ದಿನಾಂಕ:12.01.2024ರಂದು ಎರಡನೇ ಬಾರಿ ಟೆಂಡರ್ ಕರೆಯಲಾಗಿದೆ. ಎರಡು ಬಿಡ್ಡಳು ಸಲ್ಲಿಕೆಯಾಗಿದ್ದು, ಸಲ್ಲಿಕೆಯಾದ ಎರಡೂ ಬಿಡ್ಡಳು ತಾಂತ್ರಿಕವಾಗಿ ಅರ್ಹ ರಾಗಿರುವುದಿಲ್ಲ. ಈ ಕಾರಣ ಎರಡನೇ ಕರೆಯನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲು ಕ್ರಮವಹಿಸಲಾಯಿತು. |

| | | |
|---|---|---|
| 5 | ಚಿತ್ರದುರ್ಗ | ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಮೆನುವಿನಂತೆ ಆಹಾರ ವಿತರಣೆ ಅನುಷ್ಠಾನಗೊಳಿಸಬೇಕಿರುವ ಬಗ್ಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಮೊದಲನೇ ಕರೆಯಲ್ಲಿ ಟೆಂಡರ್ ಅನುಮೋದನೆ ತಾಂತ್ರಿಕವಾಗಿ ಅಪೂರ್ಣವಾದ ಕಾರಣ ಎರಡನೇ ಕರೆಯನ್ನು ದಿನಾಂಕ:09.07.2024 ರಂದು ಕರೆಯಲಾಗಿದ್ದು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 09.08.2024 ಆಗಿರುತ್ತದೆ ತಾಂತ್ರಿಕ ಬಿಡ್ ಆರ್ಥಿಕ ಬಿಡ್ ಅನುಮೋದನೆ ಪ್ರಾಧಿಕಾರ ಅನುಮೋದನೆಯಾದ ಕೂಡಲೇ ಆಗಸ್ಟ 2024 ರೊಳಗೆ ಟೆಂಡರ್ ಅಂತಿಮಗೊಳಿಸಿ ಹೊಸ ಮೆನುವಿನಂತೆ ಆಹಾರ ವಿತರಣೆಯನ್ನು ಮಾಡಲಾಗುವುದು. |
| 6 | ತುಮಕೂರು | ತುಮಕೂರು ಜಿಲ್ಲೆ ಇಂದಿರಾ ಕ್ಯಾಂಟೀನ್ ಹೊಸ ಮೆನುವಿನ ಆಹಾರ ಸರಬರಾಜು ಟೆಂಡರ್ ಗಳ ಕುರಿತು ಸರ್ಕಾರದ ಆದೇಶದ ಸಂಖ್ಯೆ ನಅಇ:162:ಎಸ್ಎಫ್ಸಿ:2023 ದಿನಾಂಕ:23.08.2023 ರ ಹೊಸ ಮೆನುವಿನ ಆದೇಶದಂತೆ ಹಾಗೂ ನಿರ್ದೇಶನಾಲಯದ ಪತ್ರದ ದಿನಾಂಕ:30.08.2023 ರನ್ವಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್ಗಳಿಗೆ ಹೊಸ ಮೆನುವಿನಂತೆ ಆಹಾರ ಸರಬರಾಜು ಮಾಡಲು ದಿನಾಂಕ: 11-09-2023 ರಂದು ಡಿಟಿಎಸ್ ಅನುಮೋದನೆಯನ್ನು ಪಡೆದಿದ್ದು ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡನ್ನು ತಾಂತ್ರಿಕ ಕಾರಣದಿಂದ ರದ್ದುಗೊಳಿಸಲಾಗಿದೆ.<br><br>ತದನಂತರ 2ನೇ ಟೆಂಡರ್ ಕರೆಯಲು ದಿನಾಂಕ:17.01.2024 ರಂದು ಡಿಟಿಎಸ್ ಅನುಮೋದನೆಯನ್ನು ಪಡೆದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:31.01.2024 ಆಗಿರುತ್ತದೆ. ತದನಂತರ ತಾಂತ್ರಿಕ್ ಬಿಡ್ ಅನುಮೋದನೆ ಪಡೆಯಲು ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲಾನ ಸಮಿತಿಯಲ್ಲಿ ಮಂಡಿಸಿದಾಗ CHEFTALK FOOD AND HOSPITALITY SERVICES PRIVATE LIMITED ರವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿರುವ ಬಗ್ಗೆ ಮಾನ್ಯ ಉಚ್ಚನ್ಯಾಯಲಯದಲ್ಲಿ ಪ್ರಕರಣವಿರುವುದರಿಂದ ಈ ಬಗ್ಗೆ ಕಾನೂನು ಸಲಹೆ ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶಿಸಿರುತ್ತಾರೆನಂತರ ದಿನಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದರಿಂದ ತಾಂತ್ರಿಕ ಬಿಡ್ ಅನುಮೋದನೆಯಾಗಿರುವುದಿಲ್ಲ. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಕಾನೂನು ಸಲಹೆ ಪಡೆದು ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲಾನ ಸಮಿತಿ ಸಭೆಗೆ ತಾಂತ್ರಿಕ್ ಬಿಡ್ ಅನುಮೋದನೆಯನ್ನು ಪಡೆಯಲು ದಿನಾಂಕವನ್ನು ನಿಗಧಿಪಡಿಸಲು ಜಿಲ್ಲಾಧಿಕಾರಿಗಳಿಗೆ ಕಡತ ಮಂಡಿಸಲಾಗಿದೆ. |
| 7 | ಹಾಸನ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕ್ಯಾಂಟೀನ್ ಗಳಿಗೆ ಟೆಂಡರ್ ಕರೆಯಲಾಗಿದ್ದು ಪ್ಯಾಕೇಜ್-1 ರಲ್ಲಿ ಏಕಮಾತ್ರ ಟೆಂಡರ್ ಇರುವುದರಿಂದ ಮರು ಟೆಂಡರ್ ಕರೆಯಲು ಪ್ಯಾಕೇಜ್-2 ರ ಆರ್ಥಿಕ ಬಿಡ್ ತೆರೆದಿದ್ದು, ಮೆ: ನಂದಿ ಹಾಸ್ಪಿಟಾಲಿಟಿ ಸರ್ವೀಸಸ್, ಪ್ರೈಲಿ ಬೆಂಗಳೂರು ರವರು ಕಡಿಮೆ ದರ ನಮೂದಿಸಿದ್ದರಿಂದ ಸದರಿಯವರ ಟೆಂಡರ್‌ಗೆ ಮಂಜೂರಾತಿ ನೀಡಿ ದಿನಾಂಕ. 13.03.2024 ರಂದು ಎಲ್.ಓ.ಎ. ನೀಡಲಾಗಿದೆ ಹಾಗೂ ಪ್ಯಾಕೇಜ್-1 ದಿನಾಂಕ. 13.3.2024 ರಂದು ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ. 23.03.2024 ರಂದು ಅಂತಿಮ ದಿನವಾಗಿರುತ್ತದೆ.<br><br>ಸಾರ್ವತ್ರಿಕ ಲೋಕಸಭಾ ಚುನಾವಣಾ ನೀತಿ ಸಂಹಿತೆ ದಿನಾಂಕ. 16.3.2024 ರಂದೆ ಜಾರಿಗೆ ಬಂದಿದ್ದು, ದಿನಾಂಕ. 4.6.2024 ರ ವರೆಗೆ ಜಾರಿಯಲ್ಲಿದ್ದುದರಿಂದ ಹಾಲಿ ಟೆಂಡರ್‌ನ್ನು ತೆರೆದು ತಾಂತ್ರಿಕವಾಗಿ ಪರಿಶೀಲನೆ ನಡೆಸಿ ಸಂಬಂದಪಟ್ಟ ಸರ್ಕಾರಿ ಸಂಸ್ಥೆಗಳಿಂದ ಕಾಮಗಾರಿ ನಿರ್ವಹಣಾ ದೃಢೀಕರಣ ಪತ್ರವನ್ನು ಪಡೆಯಲಾಗಿರುತ್ತದೆ.<br><br>ಪ್ಯಾಕೇಜ್-2 ಕ್ಕೆ ಸಂಬಂದಿಸಿದಂತೆ ಸರಬರಾಜುದಾರರಿಗೆ ಎಲ್.ಓ.ಎ. ನೀಡಿದ್ದು, ಸದರಿಯವರು ನಿಗಧಿತ ಅವಧಿಯೊಳಗೆ ಭದ್ರತಾ ಠೇವಣಿಯನ್ನು ಪಾವತಿಸದೇ ಇರುವುದರಿಂದ ಸದರಿ ಟೆಂಡರನ್ನು ಸಹ ರದ್ದುಪಡಿಸಿ ಮರು ಟೆಂಡರ್ ಕರೆಯಲು ದಿನಾಂಕ. 24.05.2024 ರಂದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುತ್ತದೆ. ಅದರಂತೆ 2ನೇ ಕರೆಗೆ ಡಿ.ಟಿ.ಎಸ್.ಮಂಜೂರಾಗಿದ್ದು, ದಿನಾಂಕ. 04.07.2024 ರಂದು ಮರು ಟೆಂಡರ್ ಕರೆಯಲಾಗಿದೆ |

| | | |
|---|---|---|
| 8 | ಬೆಂಗಳೂರು ಗ್ರಾಮಾಂತರ | ಹೊಸ ಮೆನುವಿನಂತೆ ಆಹಾರ ವಿತರಣೆ ಅನುಷ್ಠಾನಗೊಳಿಸುವ ಕುರಿತು ಈಗಾಗಲೇ ಟೆಂಡರ್ ಕರೆದು ತಾಂತ್ರಿಕ ಹಾಗೂ ರ್‍ಥಿಕ ಬಿಡ್ ನ್ನು ತೆರೆದು ಅನುಮೋದನೆ ದೊರೆತಿದ್ದು ದಿನಾಂಕ:05-07-2024 ರಂದು ಎಲ್.ಒ.ಎ ನೀಡಲಾಗಿರುತ್ತದೆ. ಗುತ್ತಿಗೆದಾರರು ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಿದ ಕೂಡಲೇ ಕಾರ್ಯದೇಶವನ್ನು ನೀಡಲಾಗುವುದಾಗಿ ಯೋಜನಾ ನಿರ್ದೇಶಕರು ಡಿಯುಡಿಸಿ ಬೆಂಗಳೂರು ಗ್ರಾಮಾಂತರ ರವರು ವರದಿಯನ್ನು ಸಲ್ಲಿಸಿರುತ್ತಾರೆ. |
| 09 | ಉತ್ತರ ಕನ್ನಡ | ಹೊಸ ಮೆನುವಿನಂತೆ ಲೋವರ್ ಘಾಟ್‌ನ ಟೆಂಡರ್ ಇಂಡೆಂಟ್ ನಂ. ಡಿಎಂಎ/2023-24/IND 0511 ನೇದರ ಕಾರ್ಯಾದೇಶವನ್ನು ದಿನಾಂಕ: 02-07-2024 ರಂತೆ ಗುತ್ತಿಗೆದಾರರಿಗೆ ನೀಡಲಾಗಿದೆ.<br>ಹೊಸ ಮೆನುವಿನಂತೆ ಅಪ್ಪರ ಘಾಟ್‌ನ ಟೆಂಡರ್ ಇಂಡೆಂಟ್ ನಂ. ಡಿಎಂಎ /2023-24/ IND 0526 call 2 ನೇದರಂತೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರನ ಆರ್ಥಿಕ ಬಿಡ್ ಅನುಮೋದನೆ ಹಂತದಲ್ಲಿದ್ದು, ಜುಲೈ-2024ನೇ ಅಂತ್ಯದೊಳಗಾಗಿ ಕಾರ್ಯಾದೇಶ ನೀಡಲಾಗುವುದೆಂದು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃಧ್ಧಿ ಕೋಶ ಉತ್ತರ ಕನ್ನಡ ಜಿಲ್ಲೆ ರವರು ವರದಿಯನ್ನು ಸಲ್ಲಿಸಿರುತ್ತಾರೆ. |
| 10 | ಧಾರವಾಡ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮಹಾನಗರ ಪಾಲಿಕೆಗಳ ಇಂದಿರಾ ಕ್ಯಾಂಟೀನ್ ಗಳಿಗೆ ಹೊಸ ಮೆನುವಿನಂತೆ ಟೆಂಡರ್ ಕರೆಯಲು ದಿನಾಂಕ:02.10.2023 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ದಿನಾಂಕ:09.11.2023 ರಂದು ತೆರಯಲಾಗಿರುತ್ತದೆ ತದನಂತರ ಆರ್ಥಿಕ ಬಿಡ್‌ನ್ನು ಸಾರ್ವತಿಕ ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಆರ್ಥಿ ಬಿಡ್ ತೆರಯಲು ಸಾಧ್ಯವಾಗಿರುವುದಿಲ್ಲ . ಚುನಾವಣೆ ನೀತಿ ಸಂಹಿತೆ ಪೂರ್ಣಗೊಂಡ ನಂತರ ದಿನಾಂಕ:29.06.2024 ರಂದು ಆರ್ಥಿಕ ಬಿಡ್ ತೆರಯಲಾಗಿದ್ದು ಎಲ್‌ಓಎ ನೀಡಲಾಗಿದೆ ಜುಲೈ-2024 ರ ಮಾಹೆಯ ಅಂತ್ಯದೊಳಗೆ ಕಾರ್ಯಾದೇಶವನ್ನು ನೀಡಲಾಗುವುದು |
| 11 | ಬೆಂಗಳೂರು ನಗರ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ 01 ಕ್ಯಾಂಟೀನ್‌ಗಳಿಗೆ ಹೊಸ ಮೆನುವಿನಂತೆ ಆಹಾರ ಸರಬರಾಜು ಮಾಡಲು ದಿನಾಂಕ:13.10.2023 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿದ್ದು ಟೆಂಡರ್ ಅಂತಿಮ ದಿನಾಂಕ:12.11.2023 ಆಗಿರುತ್ತದೆ. ಸದರಿ ಟೆಂಡರ್ ನಲ್ಲಿ ಒಬ್ಬರು ಮಾತ್ರ ಭಾಗವಹಿಸಿದ್ದು ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲ ಆದ ಕಾರಣ ಜಿಲ್ಲಾ ಸಮಿತಿಯಲ್ಲಿ ಸದರಿ ಟೆಂಡರ್‌ರನ್ನು ದಿನಾಂಕ:29.02.2024 ರದ್ದುಪಡಿಸಲಾಗಿರುತ್ತದೆ.<br>ನಂತರ ದಿನಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಟೆಂಡರ್ ಕರೆದಿರುವುದಿಲ್ಲ 02 ನೇ ಟೆಂಡರ್ ಕರೆಯಲು ಕ್ರಮ ವಹಿಸಲಾಗಿದೆ. |
| 12 | ಕಲಬುರಗಿ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮಹಾನಗರ ಪಾಲಿಕೆಗಳ ಇಂದಿರಾ ಕ್ಯಾಂಟೀನ್ ಗಳಿಗೆ ಹೊಸ ಮೆನುವಿನಂತೆ ಟೆಂಡರ್ ಕರೆಯಲು ದಿನಾಂಕ:24.01.2024 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ತೆರೆಯಲು ಜಿಲ್ಲಾ ಸಮಿತಿಯು ಸಾರ್ವತಿಕ ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ತೆರಯಲು ಸಾಧ್ಯವಾಗಿರುವುದಿಲ್ಲ. ಚುನಾವಣೆ ನೀತಿ ಸಂಹಿತೆ ಪೂರ್ಣಗೊಂಡ ನಂತರ ತಾಂತ್ರಿಕ ಬಿಡ್‌ನ್ನು ದಿನಾಂಕ:19.06.2024 ರಂದು ತೆರಯಲಾಗಿರುತ್ತದೆ ಆರ್ಥಿಕ ಬಿಡ್ ತೆರದು ಅರ್ಹರಾಗುವ ಗುತ್ತಿಗೆದಾರರಿಗೆ ಎಲ್ ಓಎ ನೀಡಿ ಜುಲೈ-2024 ರ ಮಾಹೆಯ ಅಂತ್ಯದೊಳಗೆ ಕಾರ್ಯಾದೇಶವನ್ನು ನೀಡಬೇಕಿರುತ್ತದೆ |
| 13 | ಬೀದರ್ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮಹಾನಗರ ಪಾಲಿಕೆಗಳ ಇಂದಿರಾ ಕ್ಯಾಂಟೀನ್ ಗಳಿಗೆ ಹೊಸ ಮೆನುವಿನಂತೆ ಟೆಂಡರ್ ಕರೆಯಲು ದಿನಾಂಕ:08.02.2024 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ತೆರೆಯಲು ಜಿಲ್ಲಾ ಸಮಿತಿಯು ಸಾರ್ವತಿಕ ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ತೆರಯಲು ಸಾಧ್ಯವಾಗಿರುವುದಿಲ್ಲ. ಚುನಾವಣೆ ನೀತಿ ಸಂಹಿತೆ |

| | | |
|---|---|---|
| | | ಪೂರ್ಣಗೊಂಡಿರುವುದರಿಂದ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರದು ಅರ್ಹರಾಗುವ ಗುತ್ತಿಗೆದಾರರಿಗೆ ಎಲ್‌ಓಎ ನೀಡಿ ಜುಲೈ-2024 ರ ಮಾಹೆಯ ಅಂತ್ಯದೊಳಗೆ ಕಾರ್ಯಾದೇಶವನ್ನು ನೀಡಬೇಕಿರುತ್ತದೆ |

ಮುಖ್ಯ ಆಡಳಿತಾಧಿಕಾರಿ
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದ ಮಹಾನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ನಅಇ 301 ಎಸ್‌ಎಫ್‌ಸಿ 2017, ದಿನಾಂಕ:23-10-2017, 29-11-2017 ಮತ್ತು 29-12-2017.
2. ಸರ್ಕಾರದ ಆದೇಶ ಸಂಖ್ಯೆ:ನಅಇ 47 ಎಸ್.ಎಫ್.ಸಿ 2018, ದಿನಾಂಕ:07.03.2018.
3. ಸರ್ಕಾರದ ಪತ್ರ ಸಂಖ್ಯೆ:ನಅಇ 282 ಎಸ್.ಎಫ್.ಸಿ. 2019, ದಿನಾಂಕ:23.12.2019.
4. ಸರ್ಕಾರದ ಆದೇಶ ಸಂಖ್ಯೆ:ನಅಇ 162 ಎಸ್‌ಎಫ್‌ಸಿ 2023, ದಿನಾಂಕ:13-09-2023.

***<>***

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:23.10.2017ರ ಆದೇಶದಲ್ಲಿ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಅಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲು 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 247 ಇಂದಿರಾ ಕ್ಯಾಂಟೀನ್‌ಗಳನ್ನು ಮತ್ತು 15 ಮಾಸ್ಟರ್ ಅಡುಗೆ ಕೋಣೆಗಳನ್ನು ಸ್ಥಾಪಿಸಲು ಆದೇಶಿಸಲಾಗಿರುತ್ತದೆ.

ಮೇಲೆ ತಿಳಿಸಿರುವ ಸರ್ಕಾರದ ಆದೇಶ ಸಂಖ್ಯೆ:ನಅಇ 301 ಎಸ್‌ಎಫ್‌ಸಿ 2017, ದಿನಾಂಕ:23.10.2017ರ ಆದೇಶದಲ್ಲಿನ ಕಂಡಿಕೆ (3) ಮತ್ತು (4)ರಲ್ಲಿನ ಅಂಶಗಳನ್ನು ಹಿಂಪಡೆದು, ರಾಜ್ಯದ ಒಟ್ಟು 20 ಜಿಲ್ಲೆಗಳ 112 ನಗರ ಸ್ಥಳೀಯ ಸಂಸ್ಥೆಗಳಲ್ಲಿ 116 ಅಡುಗೆ ಕೋಣೆಗಳನ್ನು ಒಳಗೊಂಡ ಕ್ಯಾಂಟೀನ್‌ಗಳು 42 ಸ್ವತಂತ್ರ ಕ್ಯಾಂಟೀನ್‌ಗಳು ಮತ್ತು 08 ಸ್ವತಂತ್ರ ಅಡುಗೆ ಕೋಣೆಗಳನ್ನು ಪೂರ್ವ ಸಿದ್ಧತಾ ಉಪಕರಣಗಳನ್ನು ಬಳಸಿ ಇಂದಿರಾ ಕ್ಯಾಂಟೀನ್ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಸಾಂಪ್ರದಾಯಿಕ ನಿರ್ಮಾಣ ಸಾಮಾಗ್ರಿಗಳನ್ನು ಬಳಸಿ ನಿರ್ಮಿಸುವ ಇಂದಿರಾ ಕ್ಯಾಂಟೀನ್ ಕಟ್ಟಡಗಳನ್ನು ಒಟ್ಟು 10 ಜಿಲ್ಲೆಗಳ 61 ನಗರ ಸ್ಥಳೀಯ ಸಂಸ್ಥೆಗಳಲ್ಲಿ 55 ಅಡುಗೆ ಕೋಣೆಗಳನ್ನು ಒಳಗೊಂಡ ಕ್ಯಾಂಟೀನ್‌ಗಳು, 34 ಸ್ವತಂತ್ರ ಕ್ಯಾಂಟೀನ್‌ಗಳು ಮತ್ತು 7 ಸ್ವತಂತ್ರ ಅಡುಗೆ ಕೋಣೆಗಳನ್ನು ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 301 ಎಸ್‌ಎಫ್‌ಸಿ 2017, ದಿನಾಂಕ:29.11.2017ರ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 301 ಎಸ್‌ಎಫ್‌ಸಿ 2017, ದಿನಾಂಕ:29.12.2017ರ ಆದೇಶದಲ್ಲಿ, ಮೇಲೆ ತಿಳಿಸಿರುವ ಸರ್ಕಾರದ ಆದೇಶ ಸಂಖ್ಯೆ:ನಅಇ 301 ಎಸ್‌ಎಫ್‌ಸಿ 2017, ದಿನಾಂಕ:29.11.2017ರ ಆದೇಶವನ್ನು ಹಿಂಪಡೆಯುತ್ತಾ, ರಾಜ್ಯದ ಒಟ್ಟು 30 ಜಿಲ್ಲೆಗಳ 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 171 ಅಡುಗೆ ಕೋಣೆ ಸಹಿತ ಕ್ಯಾಂಟೀನ್‌ಗಳು, 76 ಅಡುಗೆಕೋಣೆ ರಹಿತ ಕ್ಯಾಂಟೀನ್‌ಗಳು ಹಾಗೂ 15 ಸ್ವತಂತ್ರ ಅಡುಗೆಕೋಣೆಗಳನ್ನು ಪೂರ್ವ ಸಿದ್ಧತಾ ಉಪಕರಣ (Pre-fabricated elements) ಗಳನ್ನು ಬಳಸಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:07.03.2018ರ ಆದೇಶದಲ್ಲಿ, ಮೈಸೂರು ನಗರದ ಅಜೀಜ್ ಸೇಠ್ ರಸ್ತೆಯ ಚರ್ಮದ ಮಂಡಿಯ ಹತ್ತಿರ 01 ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ.

30/11/23

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ, ಮೊದಲನೇ ಹಂತದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯ ಕಲಂ 4 (ಜಿ) ರಡಿಯಲ್ಲಿ ಅನುಮತಿ ನೀಡಿ ಕಾರ್ಯಾದೇಶ ನೀಡಿ, ಪ್ರಸ್ತುತ ರಾಜ್ಯದಲ್ಲಿ 197 ಇಂದಿರಾ ಕ್ಯಾಂಟೀನ್‌ಗಳು ಮತ್ತು 15 ಅಡುಗೆ ಕೋಣೆಗಳು ಕಾರ್ಯ ನಿರ್ವಹಿಸುತ್ತಿದ್ದು, 28 ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣ ಕಾರ್ಯವು ಬಾಕಿ ಇದ್ದು, ಉಳಿದ 23 ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಲು ನಿವೇಶನ ಲಭ್ಯವಿಲ್ಲದ ಕಡೆ ಇಂದಿರಾ ಕ್ಯಾಂಟೀನ್ ನಿರ್ಮಾಣವನ್ನು ರದ್ದುಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ನಿರ್ದೇಶನ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ, ರಾಜ್ಯದ ಮಹಾನಗರಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಪ್ರಧಾನ ಅಭಿಯಂತರರು, ಬಿ.ಬಿ.ಎಂ.ಪಿ., ಮುಖ್ಯ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ, ಅಧೀಕ್ಷಕ ಅಭಿಯಂತರರು, ನಗರಾಭಿವೃದ್ಧಿ ಇಲಾಖೆ (ತಾಂತ್ರಿಕ ಕೋಶ) ಮತ್ತು ಅಧೀಕ್ಷಕ ಅಭಿಯಂತರರು, ಪೌರಾಡಳಿತ ಇಲಾಖೆ ಇವರುಗಳನ್ನೊಳಗೊಂಡಂತೆ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ.

ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20-09-2023 ರಂದು ನಡೆದ ತಾಂತ್ರಿಕ ಸಮಿತಿ ಸಭೆಯ ವಿಷಯ ಸಂಖ್ಯೆ 04 ರಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

**"ರಾಜ್ಯದಲ್ಲಿನ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್ ಗಳ ನಿರ್ಮಾಣದ ಬಗ್ಗೆ, ಈ ಹಿಂದೆ ನಿರ್ಮಿಸಲಾಗಿರುವ ಇಂದಿರಾ ಕ್ಯಾಂಟೀನ್ ಮತ್ತು ಇಂದಿರಾ ಕ್ಯಾಂಟೀನ್ ಕಂ ಕಿಚನ್ ಗಳ (Proto type) ಮಾದರಿಯಲ್ಲೇ ಹೊಸದಾಗಿ ನಿರ್ಮಾಣ ಮಾಡುವ ಬಗ್ಗೆ 07 ದಿನಗಳ Expression of interest ಪ್ರಕಟಣೆ ಹೊರಡಿಸಲು ಸಮಿತಿಯು ಸಲಹೆ ನೀಡಿದೆ".**

Expression of Interest ನಲ್ಲಿ ಭಾಗವಹಿಸಿರುವ 3 ಸಂಸ್ಥೆಗಳ ಪೈಕಿ Syed Khizer Bhasha (Excel Precast Solution Pvt.Ltd) ರವರು ಕನಿಷ್ಟ ದರ ನೀಡಿದ ಪ್ರತಿಕ್ರಿಯೆದಾರರಾಗಿದ್ದು ಸದರಿಯವರು ನಮೂದಿಸಿರುವ ಮತ್ತು ಈ ಹಿಂದೆ ಮೊದಲನೇ ಹಂತದಲ್ಲಿ ಅನುಮೋದನೆ ನೀಡಿರುವ ದರಗಳ ತುಲನಾತ್ಮಕ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Details | Canteen + Kitchen (Area 1533 sft) (Inclusive of 18% GST) | Canteen (Area 816 sft) (Inclusive of 18% GST) |
|---|---|---|---|
| 1 | Rates approved in Phase-1 (2017-18) | 61.76 | 33.63 |
| 2 | Amount quoted as per expression of interest (EOI) (Lead upto 50 km) | 103.11 | 54.88 |

**Additional Lead for transportation beyond 50 km**

| Sl. No | Details | Canteen (Area 816 sft) | Canteen + Kitchen (Area 1533 sft) |
|---|---|---|---|
| 1 | Rates as per EOI Received (in Rs. Inclusive of 18% GST) | 3150/- | 3150/- |

30/11/23

Expression of Interest ನಲ್ಲಿ ಸಲ್ಲಿಸಿರುವ ಅಂಶವಾರು ಪರಿಮಾಣ ಮತ್ತು ದರಗಳನ್ನು ಕೂಡಿದಾಗ ಒಟ್ಟು ಮೊತ್ತವು ಈ ಕೆಳಕಂಡಂತೆ ಇರುತ್ತದೆ.

| Sl. No | Details | Canteen + Kitchen (Area 1533 sft) (Inclusive of 18% GST) | Canteen (Area 816 sft) (Inclusive of 18% GST) |
|---|---|---|---|
| 1 | Amount as per break up submitted in expression of interest (EOI) (Lead upto 50 km) | 84.35 | 44.83 |

M/s. Excel Precast Solution Pvt. Ltd., ಸಂಸ್ಥೆಯು ದರ ವ್ಯತ್ಯಾಸದ ಬಗ್ಗೆ ನೀಡಿರುವ ಸ್ಪಷ್ಟೀಕರಣದಲ್ಲಿ ಇಂದಿರಾ ಕ್ಯಾಂಟೀನ್ ಸಹಿತ ಅಡುಗೆ ಕೋಣೆ ಕಟ್ಟಡಕ್ಕೆ ಏಜೆನ್ಸಿ Profit and Handling Charges ಸೇರಿ ರೂ.95.00 ಲಕ್ಷಗಳು ಮತ್ತು ಇಂದಿರಾ ಕ್ಯಾಂಟೀನ್ ಕಟ್ಟಡಕ್ಕೆ ರೂ.50.00 ಲಕ್ಷಗಳೆಂದು (At the rate of 20% of base estimate) ತಿಳಿಸಿದೆ.

M/s. Excel Precast Solution Pvt. Ltd., ಸಂಸ್ಥೆಯು ಹೊಂದಿರುವ ಪ್ರೀಕ್ಯಾಸ್ಟ್ ಉತ್ಪಾದನಾ ಘಟಕವನ್ನು (casting yard) ತಾಂತ್ರಿಕ ಸಮಿತಿಯು ದಿನಾಂಕ:06.11.2023ರ ಸಮಿತಿ ಸಭೆಯ ತೀರ್ಮಾನದಂತೆ ಸದರಿ ಸಂಸ್ಥೆಯ ತಂತ್ರಜ್ಞಾನ ಮತ್ತು precast ಘಟಕದಲ್ಲಿ precast slab ನಿರ್ಮಾಣ ಮಾಡುವ ತಂತ್ರಜ್ಞಾನವನ್ನು ಹೊಂದಿರುವ ಬಗ್ಗೆ ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ ಹಾಗೂ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಕಾರ್ಯಪಾಲಕ ಅಭಿಯಂತರರು ಮತ್ತು ಸ್ಥಳೀಯ ಸಂಸ್ಥೆಗಳ ತಾಂತ್ರಿಕ ಅಧಿಕಾರಿಗಳು ನೀಡಿರುವ ವರದಿ ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸದರಿ ತಂಡವು ಸಲ್ಲಿಸಿದ ತಾಂತ್ರಿಕ ವರದಿ ಮತ್ತು ಸಂಸ್ಥೆಯ 2020-21ನೇ ಸಾಲಿನಲ್ಲಿ 2021-22 ಮತ್ತು 2022-23ನೇ ಸಾಲುಗಳ ವಾರ್ಷಿಕ ಹಣಕಾಸು ವ್ಯವಹಾರಗಳನ್ನಾಧರಿಸಿ ತಾಂತ್ರಿಕ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:15.11.2023 ರಂದು ನಡೆದ ಸಭೆಯಲ್ಲಿ ಇಂದಿರಾ ಕ್ಯಾಂಟೀನ್ ಅನುಷ್ಠಾನ ಕುರಿತು ಜರುಗಿದ ಸಭಾ ನಡವಳಿಯಲ್ಲಿ M/s. Excel Precast Solution Pvt. Ltd., ಸಂಸ್ಥೆಯು ಸಲ್ಲಿಸಿರುವ ಸಂಧಾನಿತ ಮೊತ್ತಗಳ ಬಗ್ಗೆ ಚರ್ಚಿಸಿ, ಸದರಿ ಸಂಧಾನಿತ ದರಗಳನ್ನು ಕಡಿಮೆ ಮಾಡಲು ಮತ್ತೊಮ್ಮೆ ಮರು ಸಂಧಾನ (re-negotiation) ಕೈಗೊಳ್ಳಲು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯ ಕಲಂ 4(ಜಿ) ವಿನಾಯಿತಿ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಚಿವ ಸಂಪುಟದ ಮುಂದೆ ಮಂಡಿಸಲು ನಿರ್ದೇಶಿಸಿದ ಹಿನ್ನೆಲೆಯಲ್ಲಿ, M/s. Excel Precast Solution Pvt. Ltd., ಸಂಸ್ಥೆಯೊಂದಿಗೆ ಮರು ದರ ಸಂಧಾನ ಕೈಗೊಳ್ಳಲಾಗಿದ್ದು, ದರ ಸಂಧಾನದ ನಂತರ Precast ವಿಧಾನದ ಅಡುಗೆ ಕೋಣೆ ಸಹಿತ ಇಂದಿರಾ ಕ್ಯಾಂಟೀನ್ ಮತ್ತು ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಈ ಕೆಳಕಂಡ ದರಗಳಿಗೆ ಒಪ್ಪಿಗೆ ಸೂಚಿಸಿರುತ್ತಾರೆ.

| Sl. No | Details | Canteen + Kitchen (Area 1533 s.ft) (Inclusive of 18% GST) | Canteen (Area 816 s.ft) (Inclusive of 18% GST) |
|---|---|---|---|
| 1 | Final amount quoted by the firm as per expression of interest (EOI) (Lead upto 50 km) after negotiation | 87.00 | 48.00 |

ರಾಜ್ಯದ ಎಲ್ಲಾ ಪಟ್ಟಣಗಳಲ್ಲಿ ಅಸಂಘಟಿತ ವರ್ಗದ ಬಡವರಿಗೆ, ನಿರ್ದಿಷ್ಟವಾಗಿ ಹಳ್ಳಿಗಾಡು ಪ್ರದೇಶಗಳಿಂದ ಪಟ್ಟಣಗಳಿಗೆ ವಲಸೆ ಬರುವ ಕಾರ್ಮಿಕರಿಗೆ ಮತ್ತು ವಿನಾಯಿತಿ ದರದಲ್ಲಿ ಆಹಾರ ಒದಗಿಸಿ ಆಹಾರಕ್ಕಾಗಿ ಭಿಕ್ಷೆ ಬೇಡದಂತೆ ತಡೆಯಲು ಮತ್ತು ಆಹಾರ ಭದ್ರತೆ ಮತ್ತು ಅಗತ್ಯ ಪೌಷ್ಠಿಕಾಂಶಗಳನ್ನು ಒದಗಿಸುವುದು ಇಂದಿರಾ ಕ್ಯಾಂಟೀನ್ ತೆರೆಯುವ ಉದ್ದೇಶವಾಗಿರುತ್ತದೆ.

30/11/23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾಪಿಸಿದ ಇಂದಿರಾ ಕ್ಯಾಂಟೀನ್‌ಗಳು ಬಡಜನರಿಗೆ ಕೈಗೆಟುಕುವ ದರದಲ್ಲಿ ಉಪಹಾರ ಮತ್ತು ಭೋಜನ ನೀಡುವ ಕಾರ್ಯವನ್ನು ಯಶಸ್ವಿಯಾಗಿ ನಡೆಸುತ್ತಿವೆ. ಇದೇ ವ್ಯವಸ್ಥೆಯನ್ನು ರಾಜ್ಯದ ಎಲ್ಲಾ ಪಟ್ಟಣಗಳಿಗೆ ವಿಸ್ತರಿಸುವುದರಿಂದ ನಿರ್ದಿಷ್ಟವಾಗಿ ಜೀವನೋಪಾಯ ಹುಡುಕಿಕೊಂಡು ಹಳ್ಳಿಗಾಡುಗಳಿಂದ ಪಟ್ಟಣಕ್ಕೆ ವಲಸೆ ಬಂದ ಅಸಂಘಟಿತ ಕಾರ್ಮಿಕ ವರ್ಗವಲ್ಲದೇ ಆಹಾರಕ್ಕಾಗಿ ಭಿಕ್ಷೆ ಬೇಡುವ ಭಿಕ್ಷುಕರಿಗೂ ಕೈಗೆಟುಕುವ ದರದಲ್ಲಿ ಆಹಾರ ಒದಗಿಸುವುದರೊಂದಿಗೆ, ಬಡತನ ನಿರ್ಮೂಲನೆಗೆ ಮತ್ತು ಅಗತ್ಯ ಪೋಷಕಾಂಶಗಳನ್ನು ಹೊಂದಿದ ಆಹಾರ ಭದ್ರತೆ ಒದಗಿಸುವ ಕಾರ್ಯದಲ್ಲಿ ಒಂದು ಅಪೂರ್ವ ಹೆಜ್ಜೆಯಾಗಿರುತ್ತದೆ. ಆದ್ದರಿಂದ ರಾಜ್ಯದ ಮಹಾನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ 165 ಅಡಿಗೆ ಕೋಣೆ ಸಹಿತ ಇಂಧಿರಾ ಕ್ಯಾಂಟೀನ್ ಮತ್ತು 20 ಇಂಧಿರಾ ಕ್ಯಾಂಟೀನ್‌ಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ನಅಇ 162 ಎಸ್‌ಎಫ್‌ಸಿ 2023,</u>**
**<u>ಬೆಂಗಳೂರು, ದಿನಾಂಕ: 30-11-2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಮಹಾನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟಾರೆ 185 ಅಡುಗೆ ಕೋಣೆ ಸಹಿತ ಇಂದಿರಾ ಕ್ಯಾಂಟೀನ್ ಮತ್ತು ಇಂದಿರಾ ಕ್ಯಾಂಟೀನ್ ಕಾಮಗಾರಿಗಳನ್ನು ಈ ಕೆಳಕಂಡಂತೆ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ.

1. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಣಗಳಲ್ಲಿ (ಬಿಬಿಎಂಪಿ ಹೊರತುಪಡಿಸಿ) ಎರಡನೇ ಹಂತದ 165 ಅಡಿಗೆ ಕೋಣೆ ಸಹಿತ ಇಂಧಿರಾ ಕ್ಯಾಂಟೀನ್ ಮತ್ತು 20 ಇಂಧಿರಾ ಕ್ಯಾಂಟೀನ್‌ಗಳನ್ನು ಮೊದಲನೇ ಹಂತದಲ್ಲಿ ನಿರ್ಮಿಸಲಾದ Precast ವಿಧಾನದ ಮಾದರಿ ಹಾಗೂ ಅನುಮೋದಿತ ವಿನ್ಯಾಸದಲ್ಲಿಯೇ ನಿರ್ಮಿಸಲು ಅನುಮೋದನೆ ನೀಡಿದೆ.
2. M/s. Excel Precast Solution Pvt. Ltd., ಸಂಸ್ಥೆಯ ಶೇ.18ರಷ್ಟು ಜಿ.ಎಸ್.ಟಿ. ಒಳಗೊಂಡ ಮರುಸಂದಾನಿತ ದರಗಳಾದ ರೂ.87.00 ಲಕ್ಷಗಳಿಗೆ ಅಡುಗೆ ಕೋಣೆ ಸಹಿತ ಇಂದಿರಾ ಕ್ಯಾಂಟೀನ್ ಮತ್ತು ರೂ.48.00 ಲಕ್ಷಗಳಿಗೆ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಹಾಗೂ 50 ಕಿ.ಮೀ. ಗಿಂತ ಹೆಚ್ಚಿನ ದೂರಕ್ಕೆ ಪ್ರತಿ ಕಿಮೀ ಹೆಚ್ಚುವರಿ ದೂರದ ಸಾಗಾಣಿಕೆಗೆ ರೂ 3150/- ಗಳಿಗೆ ಅನುಮೋದನೆ ನೀಡಿದೆ.
3. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಣಗಳಲ್ಲಿ (ಬಿಬಿಎಂಪಿ ಹೊರತುಪಡಿಸಿ) 165 ಅಡುಗೆಕೋಣೆ ಸಹಿತ ಇಂದಿರಾ ಕ್ಯಾಂಟೀನ್‌ಗಳನ್ನು ಮತ್ತು 20 ಇಂದಿರಾ ಕ್ಯಾಂಟೀನ್ ಗಳು ಸೇರಿ ಒಟ್ಟು 185 ಇಂದಿರಾ ಕ್ಯಾಂಟೀನ್ ಮತ್ತು ಅಡುಗೆಕೋಣೆ ಸಹಿತ ಇಂದಿರಾ ಕ್ಯಾಂಟೀನ್ ಗಳನ್ನು M/s. Excel Precast Solution Pvt. Ltd., ಸಂಸ್ಥೆಯ ಮೂಲಕ ಅನುಮೋದಿತ ಮಾದರಿ ವಿನ್ಯಾಸದ ಪ್ರಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ ಕಲಂ 4(ಜಿ) ವಿನಾಯತಿ ನೀಡಿ ಒಟ್ಟು ವೆಚ್ಚ ರೂ.15459.00 ಲಕ್ಷಗಳಲ್ಲಿ (ಹದಿನೈದು ಸಾವಿರದ ನಾಲ್ಕುನೂರ ಐವತ್ತೊಂಬತ್ತು ಲಕ್ಷ ರುಪಾಯಿಗಳು) ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ.
4. ಈ ಹಿಂದೆ ಹೊರಡಿಸಲಾಗಿರುವ ಎಲ್ಲಾ ಆದೇಶ / ಸುತ್ತೋಲೆಗಳನ್ನು ಪರಿಗಣಿಸಿ ಎಲ್ಲಾ ಅಡಿಗೆ ಕೋಣೆ ಸಹಿತ ಇಂಧಿರಾ ಕ್ಯಾಂಟೀನ್ ಮತ್ತು ಇಂಧಿರಾ ಕ್ಯಾಂಟೀನ್‌ಗಳ ಕಾಮಗಾರಿಗಳನ್ನು ಪೌರಾಡಳಿತ ನಿರ್ದೇಶನಾಲಯದಿಂದ ಅನುಷ್ಠಾನಗೊಳಿಸತಕ್ಕದ್ದು.
5. ಅಡಿಗೆ ಕೋಣೆ ಸಹಿತ ಇಂಧಿರಾ ಕ್ಯಾಂಟೀನ್ ಮತ್ತು ಇಂಧಿರಾ ಕ್ಯಾಂಟೀನ್‌ಗಳನ್ನು ಅನುಷ್ಠಾನಗೊಳಿಸಲು ನೂತನವಾಗಿ ಆಯ್ಕೆಯಾಗಿರುವ ನಗರಸ್ಥಳೀಯ ಸಂಸ್ಥೆಗಳ ವಿವರಗಳನ್ನು ಅನುಬಂಧದಲ್ಲಿ ತಿಳಿಸಿದೆ.

30/11/23

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 426 ವೆಚ್ಚ-9/2023, ದಿನಾಂಕ:16-11-2023ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸಚಿವ ಸಂಪುಟ ಸಭೆ ಸಂಖ್ಯೆ:13 ಪ್ರಕರಣ ಸಂಖ್ಯೆ ಸಿ.537/2023ರ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:15ರ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

30/11/23
(ನರಸಿಂಹ.ಎಂ.ಆರ್)
ಜಂಟಿ ನಿರ್ದೇಶಕರು(ಯೋಜನೆ) ಹಾಗೂ
ಪದನಿಮಿತ್ತ ಉಪ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು (ಜಿ & ಎಸ್.ಎಸ್.ಎ), (ಜಿ & ಆರ್.ಎಸ್.ಎ) ಮತ್ತು (ಎ & ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು / ಆಪ್ತ ಕಾರ್ಯದರ್ಶಿಯವರು ಸಂಬಂಧಿಸಿದ ಜಿಲ್ಲಾ ಉಸ್ತುವಾರಿ ಸಚಿವರು (ಜಿಲ್ಲಾಧಿಕಾರಿಗಳ ಮುಖಾಂತರ).
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು, ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ / ಆರ್ಥಿಕ ಇಲಾಖೆ / ಯೋಜನಾ ಇಲಾಖೆ / ನಗರಾಭಿವೃದ್ಧಿ ಇಲಾಖೆ.
4. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
5. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ರಾಜ್ಯಸಭಾ / ಲೋಕ ಸಭಾ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
6. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ವಿಧಾನಸಭೆ / ವಿಧಾನ ಪರಿಷತ್ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
7. ಸಂಬಂಧಿಸಿದ ಮಹಾನಗರಪಾಲಿಕೆಗಳ ಮೇಯರ್ / ಉಪ ಮೇಯರ್ (ಸಂಬಂಧಿಸಿದ್ದ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರ ಮುಖಾಂತರ)
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ).
9. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ.
10. ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳು (ಪೌರಾಡಳಿತ ನಿರ್ದೇಶನಾಲಯದ ಮುಖಾಂತರ).
11. ಇಂದಿರಾ ಕ್ಯಾಂಟೀನ್ ಜಿಲ್ಲಾ ಸಮಿತಿಯ ಸದಸ್ಯರುಗಳಿಗೆ (ಜಿಲ್ಲಾಧಿಕಾರಿಗಳ ಮುಖಾಂತರ).
12. ಸಂಬಂಧಪಟ್ಟ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರು (ಪೌರಾಡಳಿತ ನಿರ್ದೇಶನಾಲಯದ ಮುಖಾಂತರ)
13. ಸಂಬಂಧಪಟ್ಟ ಎಲ್ಲಾ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರು/ ಮುಖ್ಯಾಧಿಕಾರಿಗಳು (ಪೌರಾಡಳಿತ ನಿರ್ದೇಶನಾಲಯದ ಮುಖಾಂತರ)
14. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
15. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
16. ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಜಂಟಿ ನಿರ್ದೇಶಕರು (ಯೋಜನೆ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕ, ನಗರಾಭಿವೃದ್ಧಿ ಇಲಾಖೆ.
17. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-3 ಮತ್ತು 9, ವಿಧಾನಸೌಧ, ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ನ ಅಇ 162 ಎಸ್ ಎಫ್ ಸಿ 2023
ದಿನಾಂಕ: 30/11/2023

## ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಗಳ ಹೆಸರು | ಸ್ಥಳೀಯ ಸಂಸ್ಥೆಯ ವಿಧ |
|---|---|---|---|
| 1 | ಬಾಗಲಕೋಟೆ | ಲೋಕಾಪುರ | TP |
| 2 | ಬಾಗಲಕೋಟೆ | ಅಮೀನಗಡ | TP |
| 3 | ಬಾಗಲಕೋಟೆ | ಕಮತಗಿ | TP |
| 4 | ಬಾಗಲಕೋಟೆ | ಶಿರೂರ | TP |
| 5 | ಬಾಗಲಕೋಟೆ | ಬೆಳಗಲಿ | TP |
| 6 | ಬಾಗಲಕೋಟೆ | ಕೆರೂರ | TP |
| 7 | ಬಾಗಲಕೋಟೆ | ತೇರದಾಳ | TMC |
| 8 | ಬಾಗಲಕೋಟೆ | ಗುಳೇದಗುಡ್ಡ | TMC |
| 9 | ಬಾಗಲಕೋಟೆ | ಇಳಕಲ್ | CMC |
| 10 | ಬಾಗಲಕೋಟೆ | ರಬಕವಿ ಬನಹಟ್ಟಿ | CMC |
| 11 | ಬಳ್ಳಾರಿ | ಕುಡತಿನಿ | TP |
| 12 | ಬಳ್ಳಾರಿ | ಕುರುಗೋಡು | TMC |
| 13 | ಬಳ್ಳಾರಿ | ಕುರೇಕುಪ್ಪ | TMC |
| 14 | ಬಳ್ಳಾರಿ | ತೆಕ್ಕಲಕೋಟೆ | TP |
| 15 | ಬಳ್ಳಾರಿ | ಕಂಪ್ಲಿ | TMC |
| 16 | ಬೆಳಗಾವಿ | ಎಂ.ಕೆ.ಹುಬ್ಬಳ್ಳಿ | TP |
| 17 | ಬೆಳಗಾವಿ | ಕಾಗವಾಡ | TP |
| 18 | ಬೆಳಗಾವಿ | ಶೇಡಬಾಳ | TP |
| 19 | ಬೆಳಗಾವಿ | ಕಲ್ಲೋಳಿ | TP |
| 20 | ಬೆಳಗಾವಿ | ಬೋರಗಾಂವ | TP |
| 21 | ಬೆಳಗಾವಿ | ಅರಭಾಂವಿ | TP |
| 22 | ಬೆಳಗಾವಿ | ನಾಗನೂರು | TP |
| 23 | ಬೆಳಗಾವಿ | ಕಂಕಣವಾಡಿ | TP |
| 24 | ಬೆಳಗಾವಿ | ಎಕ್ಸಾಂಬಾ | TP |
| 25 | ಬೆಳಗಾವಿ | ಚೆನ್ನಮ್ಮನ ಕಿತ್ತೂರು | TP |
| 26 | ಬೆಳಗಾವಿ | ಪೀರನವಾಡಿ | TP |
| 27 | ಬೆಳಗಾವಿ | ಮಚ್ಚೆ | TP |
| 28 | ಬೆಳಗಾವಿ | ರಾಯಭಾಗ | TP |
| 29 | ಬೆಳಗಾವಿ | ಕಬ್ಬೂರು | TP |
| 30 | ಬೆಳಗಾವಿ | ಐನಾಪುರ | TP |
| 31 | ಬೆಳಗಾವಿ | ಚಿಂಚಲಿ | TP |
| 32 | ಬೆಳಗಾವಿ | ಖಾನಾಪುರ | TP |
| 33 | ಬೆಳಗಾವಿ | ಯರಗಟ್ಟಿ | TP |
| 34 | ಬೆಳಗಾವಿ | ಮುನವಳ್ಳಿ | TMC |
| 35 | ಬೆಳಗಾವಿ | ಕುಡಚಿ | TMC |
| 36 | ಬೆಳಗಾವಿ | ಸದಲಗಾ | TMC |
| 37 | ಬೆಳಗಾವಿ | ಮುಗಳಖೋಡ | TMC |
| 38 | ಬೆಳಗಾವಿ | ಘಟಪ್ರಭಾ | TMC |
| 39 | ಬೆಳಗಾವಿ | ಕೊಣ್ಣೂರ | TMC |
| 40 | ಬೆಳಗಾವಿ | ಮೂಡಲಗಿ | TMC |
| 41 | ಬೆಳಗಾವಿ | ಹಾರೂಗೇರಿ | TMC |
| 42 | ಬೆಳಗಾವಿ | ಸಂಕೇಶ್ವರ | TMC |
| 43 | ಬೆಳಗಾವಿ | ಚಿಕ್ಕೋಡಿ | TMC |
| 44 | ಬೆಳಗಾವಿ | ರಾಮದುರ್ಗ | TMC |
| 45 | ಬೆಳಗಾವಿ | ಅಥಣಿ | TMC |
| 46 | ಬೆಳಗಾವಿ | ನಿಪ್ಪಾಣಿ | CMC |

30/11/23

| ಕ್ರಮ ಸಂಖ್ಯೆ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಗಳ ಹೆಸರು | ಸ್ಥಳೀಯ ಸಂಸ್ಥೆಯ ವಿಧ |
|---|---|---|---|
| 47 | ಬೆಂಗಳೂರು ಗ್ರಾಮಾಂತರ | ಬಾಶೆಟ್ಟಿಹಳ್ಳಿ | TP |
| 48 | ಬೆಂಗಳೂರು ಗ್ರಾಮಾಂತರ | ವಿಜಯಪುರ | TMC |
| 49 | ಬೆಂಗಳೂರು ನಗರ | ಜಿಗಣಿ | TMC |
| 50 | ಬೆಂಗಳೂರು ನಗರ | ಅತ್ತಿಬೆಲೆ | TMC |
| 51 | ಬೆಂಗಳೂರು ನಗರ | ಚಂದಾಪುರ | TMC |
| 52 | ಬೆಂಗಳೂರು ನಗರ | ಹುಣಸಮಾರನಹಳ್ಳಿ | TMC |
| 53 | ಬೆಂಗಳೂರು ನಗರ | ಬೊಮ್ಮಸಂದ್ರ | TMC |
| 54 | ಬೆಂಗಳೂರು ನಗರ | ಚಿಕ್ಕಬಾಣಾವರ | TMC |
| 55 | ಬೆಂಗಳೂರು ನಗರ | ಮಾದನಾಯಕನಹಳ್ಳಿ | CMC |
| 56 | ಬೆಂಗಳೂರು ನಗರ | ಹೆಬ್ಬಗೋಡಿ | CMC |
| 57 | ಬೀದರ್ | ಬೀದರ್ | CMC |
| 58 | ಬೀದರ್ | ಹಳ್ಳಿಖೇಡ | TMC |
| 59 | ಬೀದರ್ | ಚಿಟಗುಪ್ಪಾ | TMC |
| 60 | ಚಾಮರಾಜನಗರ | ಹನೂರು | TP |
| 61 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | TMC |
| 62 | ಚಿಕ್ಕಮಗಳೂರು | ಬೀರೂರು | TMC |
| 63 | ಚಿಕ್ಕಮಗಳೂರು | ಅಜ್ಜಂಪುರ | TP |
| 64 | ಚಿತ್ರದುರ್ಗ | ನಾಯಕನಹಟ್ಟಿ | TP |
| 65 | ಚಿತ್ರದುರ್ಗ | ಮೊಳಕಾಲ್ಮೂರು | TP |
| 66 | ದಕ್ಷಿಣ ಕನ್ನಡ | ಕೋಟೆಕಾರು | TP |
| 67 | ದಕ್ಷಿಣ ಕನ್ನಡ | ಕಿನ್ನಿಗೋಳಿ | TP |
| 68 | ದಕ್ಷಿಣ ಕನ್ನಡ | ಮೂಲ್ಕಿ | TP |
| 69 | ದಕ್ಷಿಣ ಕನ್ನಡ | ವಿಟ್ಲ | TP |
| 70 | ದಕ್ಷಿಣ ಕನ್ನಡ | ಬಜಪೆ | TP |
| 71 | ದಕ್ಷಿಣ ಕನ್ನಡ | ಬೆಳ್ತಂಗಡಿ | TP |
| 72 | ದಕ್ಷಿಣ ಕನ್ನಡ | ಮೂಡುಬಿದಿರೆ | TMC |
| 73 | ದಕ್ಷಿಣ ಕನ್ನಡ | ಉಳ್ಳಾಲ | CMC |
| 74 | ದಾವಣಗೆರೆ | ಹೊನ್ನಾಳಿ | TMC |
| 75 | ದಾವಣಗೆರೆ | ಮಲೆಬೆನ್ನೂರು | TMC |
| 76 | ಧಾರವಾಡ | ಕಲಘಟಗಿ | TP |
| 77 | ಧಾರವಾಡ | ಅಳ್ನಾವರ | TP |
| 78 | ಧಾರವಾಡ | ಕುಂದಗೋಳ | TP |
| 79 | ಧಾರವಾಡ | ನವಲಗುಂದ | TMC |
| 80 | ಧಾರವಾಡ | ಅಣ್ಣಿಗೇರಿ | TMC |
| 81 | ಗದಗ | ನರೇಗಲ್ | TP |
| 82 | ಗದಗ | ಮುಳಗುಂದ | TP |
| 83 | ಗದಗ | ರೋಣ | TMC |
| 84 | ಗದಗ | ಗಜೇಂದ್ರಗಡ | TMC |
| 85 | ಗದಗ | ಲಕ್ಷ್ಮೇಶ್ವರ | TMC |
| 86 | ಹಾವೇರಿ | ರಟ್ಟೆಹಳ್ಳಿ | TP |
| 87 | ಹಾವೇರಿ | ಗುತ್ತಲ | TP |
| 88 | ಹಾವೇರಿ | ಬಂಕಾಪುರ | TMC |
| 89 | ಹಾವೇರಿ | ಹಾನಗಲ್ | TMC |
| 90 | ಹಾವೇರಿ | ಶಿಗ್ಗಾಂವ್ | TMC |
| 91 | ಹಾವೇರಿ | ಬ್ಯಾಡಗಿ | TMC |
| 92 | ಹಾವೇರಿ | ಸವಣೂರು | TMC |
| 93 | ಕಲಬುರಗಿ | ಜೇವರ್ಗಿ | TMC |
| 94 | ಕಲಬುರಗಿ | ಅಫಜಲಪುರ | TMC |
| 95 | ಕಲಬುರಗಿ | ವಾಡಿ | TMC |
| 96 | ಕಲಬುರಗಿ | ಸೇಡಂ | TMC |

30/11/23

| ಕ್ರಮ ಸಂಖ್ಯೆ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಗಳ ಹೆಸರು | ಸ್ಥಳೀಯ ಸಂಸ್ಥೆಯ ವಿಧ |
|---|---|---|---|
| 97 | ಕಲಬುರಗಿ | ಆಳಂದ | TMC |
| 98 | ಕಲಬುರಗಿ | ಶಹಾಬಾದ್ | CMC |
| 99 | ಕಲಬುರಗಿ | ಯಡ್ರಾಮಿ | TP |
| 100 | ಕೊಡಗು | ಸೋಮವಾರಪೇಟೆ | TP |
| 101 | ಕೊಡಗು | ಕುಶಾಲನಗರ | TMC |
| 102 | ಕೊಡಗು | ಮಡಿಕೇರಿ | CMC |
| 103 | ಕೋಲಾರ | ವೇಮಗಲ್-ಕುರಗಲ್ | TP |
| 104 | ಕೋಲಾರ | ಮಾಲೂರು | TMC |
| 105 | ಕೋಲಾರ | ಮುಳಬಾಗಿಲು | CMC |
| 106 | ಕೋಲಾರ | ರಾಬರ್ಟ್‌ಸನ್‌ಪೇಟೆ | CMC |
| 107 | ಕೊಪ್ಪಳ | ಕನಕಗಿರಿ | TP |
| 108 | ಕೊಪ್ಪಳ | ಕುಕನೂರು | TP |
| 109 | ಕೊಪ್ಪಳ | ಭಾಗ್ಯನಗರ | TP |
| 110 | ಕೊಪ್ಪಳ | ಕುಷ್ಟಗಿ | TMC |
| 111 | ಕೊಪ್ಪಳ | ಕಾರಟಗಿ | TMC |
| 112 | ಮಂಡ್ಯ | ಬೆಳ್ಳೂರು | TP |
| 113 | ಮೈಸೂರು | ಸರಗೂರು | TP |
| 114 | ಮೈಸೂರು | ಕಡಕೋಳ | TP |
| 115 | ಮೈಸೂರು | ಪಿರಿಯಾಪಟ್ಟಣ | TMC |
| 116 | ಮೈಸೂರು | ಬನ್ನೂರು | TMC |
| 117 | ಮೈಸೂರು | ಬೋಗಾದಿ | TP |
| 118 | ಮೈಸೂರು | ರಮ್ಮನಹಳ್ಳಿ | TP |
| 119 | ಮೈಸೂರು | ಹೂಟಗಳ್ಳಿ | CMC |
| 120 | ರಾಯಚೂರು | ಹಟ್ಟಿ | TP |
| 121 | ರಾಯಚೂರು | ಸಿರವಾರ | TP |
| 122 | ರಾಯಚೂರು | ತುರುವಿಹಾಳ | TP |
| 123 | ರಾಯಚೂರು | ಮುದಗಲ್ | TMC |
| 124 | ರಾಯಚೂರು | ಮಸ್ಕಿ | TMC |
| 125 | ರಾಮನಗರ | ಹಾರೋಹಳ್ಳಿ | TP |
| 126 | ರಾಮನಗರ | ಬಿಡದಿ | TMC |
| 127 | ಶಿವಮೊಗ್ಗ | ತೀರ್ಥಹಳ್ಳಿ | TP |
| 128 | ಶಿವಮೊಗ್ಗ | ಹೊಳೆಹೊನ್ನೂರು | TP |
| 129 | ಶಿವಮೊಗ್ಗ | ಶಿರಾಳಕೊಪ್ಪ | TMC |
| 130 | ಶಿವಮೊಗ್ಗ | ಆನವಟ್ಟಿ | TP |
| 131 | ಶಿವಮೊಗ್ಗ | ಹೊಸನಗರ | TP |
| 132 | ಶಿವಮೊಗ್ಗ | ಸೊರಬ | TMC |
| 133 | ಶಿವಮೊಗ್ಗ | ಶಿಕಾರಿಪುರ | TMC |
| 134 | ತುಮಕೂರು | ಹುಳಿಯಾರು | TP |
| 135 | ತುಮಕೂರು | ತುರುವೇಕೆರೆ | TP |
| 136 | ಉಡುಪಿ | ಕಾಪು | TMC |
| 137 | ಉಡುಪಿ | ಬೈಂದೂರು | TP |
| 138 | ಉತ್ತರ ಕನ್ನಡ | ಸಿದ್ದಾಪುರ | TP |
| 139 | ಉತ್ತರ ಕನ್ನಡ | ಮಂಕಿ | TP |
| 140 | ಉತ್ತರ ಕನ್ನಡ | ಹೊನ್ನಾವರ | TP |
| 141 | ಉತ್ತರ ಕನ್ನಡ | ಜಾಲಿ | TP |
| 142 | ಉತ್ತರ ಕನ್ನಡ | ಕುಮಟಾ | TMC |
| 143 | ಉತ್ತರ ಕನ್ನಡ | ಶಿರಸಿ | CMC |
| 144 | ವಿಜಯಪುರ | ಬಬಲೇಶ್ವರ | TP |
| 145 | ವಿಜಯಪುರ | ತಿಕೋಟಾ | TP |

30/11/21